ಮಾತ್ರ ಬೇರೆಯಾಗೋದಕ್ಕೆ ಅವಳು ಅದೆಂಥ ಘನವಾದ, ರೂಪಕಾತ್ಮಕವಾದ ಎಲ್ಲವನ್ನೂ ಬಳಸ್ತಾ ಇರ್ತಾಳೆ. ಆದರೆ ಈ ಪಿತೃಸಂಸ್ಕೃತಿ ಅವಳನ್ನ ತನಗೆ ಹೇಗೆ ಬೇಕೋ ಹಾಗೆ ಅರ್ಥ ಮಾಡಿಕೊಳ್ಳುತ್ತೆ. ಅದನ್ನೇ ಅಂತಿಮ ಅನ್ನುವ ಹಾಗೆ ಸ್ಥಾಪಿಸೋದಿಕ್ಕೂ ಪ್ರಯತ್ನಿಸ್ತಾ ಇರುತ್ತೆ. ಸೀತೆಯಂತಹ ಪರಮ ಬಂಡಾಯಗಾರ್ತಿಯನ್ನ ಭಾರತೀಯ ಹೆಣ್ಣಿನ ಆತ್ಯಂತಿಕ ಮಾದರಿ ಅನ್ನುವ ಹಾಗೆ ಎಷ್ಟು ಶಕ್ತವಾಗಿ ಮಂಡಿಸುತ್ತೆ ನೋಡಿ.

**ವೀಣಾ:** ನಿಜ ಆಶಾ, ಹೆಣ್ಣನ್ನ ತನ್ನ ಅಧೀನದಲ್ಲೇ ಇಟ್ಟುಕೊಳ್ಳೋದಿಕ್ಕೆ ನಮ್ಮ ಪುರುಷ ಪ್ರಧಾನ ವ್ಯವಸ್ಥೆ ಯಾವಾಗಲೂ ಬೇರೆ ಬೇರೆ ವಿಧಗಳಿಂದ ಪ್ರಯತ್ನಿಸ್ತಾನೇ ಬಂದಿದೆ. ತನ್ನ ಬೇಕು ಬೇಡಗಳನ್ನ ಪೂರೈಸಿಕೊಳ್ಳಲು ಹೆಣ್ಣು ನಿರಂತರವಾಗಿ ಹೋರಾಡುತ್ತಲೇ ಬರಬೇಕಾಗಿದೆ. ಕುಟುಂಬದಲ್ಲಿ ತನ್ನ ಸ್ಥಾನಮಾನ ಉಳಿಸಿಕೊಳ್ಳೋದಿಕ್ಕೆ, ಉದ್ಯೋಗದಲ್ಲಿ ತನ್ನ ಅಸ್ತಿತ್ವ ಪ್ರತಿಪಾದಿಸೋದಿಕ್ಕೆ, ಹಾಗೆಯೇ ಸಮಾಜದಲ್ಲಿ, ರಾಜಕಾರಣದಲ್ಲಿ, ವಿವಿಧ ರಂಗಗಳಲ್ಲಿ ತನ್ನ ಸ್ವಂತಿಕೆಯನ್ನ ಗುರುತಿಸಿಕೊಳ್ಳುವುದಕ್ಕೆ ಅವಳು ಇನ್ನೂ ಹೋರಾಟ ನಡೆಸ್ತಾನೇ ಇದ್ದಾಳೆ. ಪ್ರಶ್ನೆ ಅವಳ ಶಕ್ತಿಸಾಮರ್ಥ್ಯದ್ದಲ್ಲವೇ ಅಲ್ಲ ಅನ್ನೋದು ನಮಗೂ ಅವರಿಗೂ ಖಂಡಿತವಾಗಿಯೂ ಗೊತ್ತಿದೆ. ಕೊನೆಗೂ ಇದು ಬದಲಾಗಬೇಕಾದ ಮನಃಸ್ಥಿತಿಯ ಪ್ರಶ್ನೆ. ಬರವಣಿಗೆಯ ವಿಷಯವನ್ನೇ ತೆಗೆದುಕೊಳ್ಳಿ, ವಸ್ತುವಿನ ಆಯ್ಕೆ ಮೊದಲುಗೊಂಡು ಅಭಿವ್ಯಕ್ತಿ ವಿಧಾನದವರೆಗೂ ಆಕೆ ಅನೇಕ ಪ್ರತ್ಯಕ್ಷ–ಅಪ್ರತ್ಯಕ್ಷ ಹೋರಾಟವನ್ನ ಮಾಡ್ತಾನೇ ಬಂದಿದ್ದಾಳೆ. ತನಗೆ ಅನ್ನಿಸಿದ್ದನ್ನೆಲ್ಲಾ ಬರೆಯುವ ಸ್ವಾತಂತ್ರ್ಯ ನಮ್ಮಲ್ಲಿ ಎಷ್ಟು ಜನರಿಗಿದೆ?

**ಆಶಾ:** ಅದಕ್ಕೇ ತಾನೆ ನಿಮ್ಮ ಬರವಣಿಗೆಯ ಬಗ್ಗೆ ಆ ನಮೂನಿ ಅಪಪ್ರಚಾರ, ವಿರೋಧ ಎಲ್ಲಾ ಬಂದದ್ದು. ಪ್ರತಿಭಾ ನಂದಕುಮಾರ್ ಅವರ ಆತ್ಮಚರಿತ್ರೆಯ ಬಗ್ಗೆ ಮಾತನಾಡ್ತಾ ಲೇಖಕರೊಬ್ಬರು, 'ಏನಮ್ಮಾ ಅದನ್ನ ಓದೋಕೆ ಭಯವಾಗುತ್ತೆ, ಎಲ್ಲರೂ ಹೇಳೋದನ್ನ ಕೇಳಿ' ಅಂದ್ರು. ನಾನು 'ಸ್ವಾಮಿ, ಜೀವನದಲ್ಲಿ ಒಂದುಸಲವಾದರೂ ಭಯವಾಗಬೇಡವೆ ನಿಮಗೆ' ಅಂದೆ. ಇದನ್ನೇ ಸ್ವಲ್ಪ ತಾತ್ವಿಕವಾಗಿ ಚರ್ಚೆಗೆ ಎತ್ತಿಕೊಳ್ಳುವುದಾದರೆ, ನೀವು ಸ್ತ್ರೀವಾದವನ್ನ ಹ್ಯಾಗೆ ವ್ಯಾಖ್ಯಾನಿಸ್ತೀರಿ?

**ವೀಣಾ:** ಈಗಾಗಲೇ ಅನೇಕ ಮಂದಿ ಸಿಮೊನ್ ದಿ ಬುವಾನೂ ಸೇರಿದ ಹಾಗೆ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಲೇಖಕಿಯರು ಈ ಬಗ್ಗೆ ವಿವರವಾಗಿ ವ್ಯಾಖ್ಯಾನಿಸಿದ್ದಾರೆ. ಅವರ ಬಹುಪಾಲು ವಿಚಾರಗಳ ಜೊತೆ ನನಗೆ ಸಹಮತವಿದೆ. ಹೆಣ್ಣಿನ ಸ್ವಂತ ವ್ಯಕ್ತಿತ್ವದ ಪ್ರತಿಪಾದನೆ, ಅವಳ ಅಸ್ಮಿತೆಯ ಅರಿವು, ಅವಳ ಹಕ್ಕುಬಾಧ್ಯತೆಗಳ ಬಗೆಗಿನ ಜಾಗೃತಿ, ಅವಳ ಮೇಲಾಗುವ ಅನ್ಯಾಯ ದಬ್ಬಾಳಿಕೆಗಳ ವಿರುದ್ಧ ಪ್ರತಿಭಟನೆ, ಅವಳ ಸರ್ವಾಂಗೀಣ ವಿಕಾಸಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳು, ಈ ನಿಟ್ಟಿನಲ್ಲಿ ಸಿದ್ಧವಾಗಬೇಕಾದ ಅವಳ ಮನೋಭೂಮಿಕೆ... ಇತ್ಯಾದಿ ಎಲ್ಲವನ್ನೂ ಸ್ತ್ರೀವಾದ ಒಳಗೊಳ್ಳುತ್ತದೆ. ಇದು ಕೇವಲ ಚರ್ಚೆಗಾಗಿ ಬಳಸುವ ಒಂದು ವಿಚಾರ ಪ್ರಣಾಲಿಕೆ ಮಾತ್ರವಲ್ಲ, ಒಂದು ವ್ಯವಸ್ಥಿತ ಜೀವನಕ್ರಮ ಆಗಬೇಕು.

**ಆಶಾ:** ಖಂಡಿತಾ ಮೇಡಂ... ಸ್ತ್ರೀವಾದವನ್ನ ಒಂದು ವಾದ ಅಂತ ತಿಳಿಯೋದೆ ಅದಕ್ಕೆ ಮಾಡುವ ಅವಮಾನ. ಯಾವ ಅನುಮಾನವೂ ಇಲ್ಲದೇ ಸ್ತ್ರೀವಾದ ಅನ್ನೋದು ಒಂದು ಅಪ್ಪಟ ಮಾನವೀಯವಾದ ಲೋಕಮೀಮಾಂಸೆ. ಯಾರನ್ನೂ ಯಾವುದನ್ನೂ ಬಿಡದ, ಮೇಲಾಟದಲ್ಲಿ ನಂಬಿಕೆಯಿಲ್ಲದ, ಮಾನವೀಯ ನೆಲೆಯಲ್ಲಿಯೇ ಗಂಡು ಹೆಣ್ಣಿನ ಸಂಬಂಧವನ್ನು ಪ್ರೀತಿ ಮತ್ತು ಗೌರವದಲ್ಲಿ ಕಟ್ಟುವ ಪ್ರಯತ್ನ ಇದು. ಗಂಡುಹೆಣ್ಣಿನ ನಡುವೆ ಇರುವ ಅಧಿಕಾರದ ಸಂಬಂಧವನ್ನು ವಿಸರ್ಜಿಸಬೇಕು ಎನ್ನುವುದರ ಕಡೆಗಿನ ಚಲನೆ ಇದು. ಇನ್ನೂ ಮುಂದುವರೆದು ಹೇಳೋದಾದರೆ,